# ಬಿಗ್ ಬಾಸ್ ಎಲ್ಲಿ? ಯಾರು?



ಕರ್ಕಿ ಕೃಷ್ಣಮೂರ್ತಿ

ನಮ್ಮ ಸಂಗಾತಿಗೆ ಯಾವ ಬಣ್ಣದ ಒಳ ಉಡುಪು ಇಷ್ಟ ಎನ್ನುವುದನ್ನು ನಮಗಿಂತಲೂ ನಿಖರವಾಗಿ ಬಲ್ಲ ಬಿಗ್ ಬಾಸ್

ಟೀವಿಯಲ್ಲಿ ಎಂಬತ್ತರ ದಶಕದ ಸಿನಿಮಾವೊಂದನ್ನು ನೋಡುತ್ತಿದ್ದೆ. ಅದರಲ್ಲಿಯ ಖಳನಾಯಕ ಬಲು ಪ್ರಚಂಡ. ಆದರೆ, ತನ್ನ ಮುಖ ಮಾತ್ರ ತೋರುವುದಿಲ್ಲ. ಸಹಚರರಿಗೆ ಕೂಡಾ ಆತನ ದರ್ಶನಭಾಗ್ಯ ಅಲಭ್ಯ. ಬಹಳ ಆಧುನಿಕ ತಂತ್ರಜ್ಞಾನ ಹೊಂದಿದ 'ಕೋಟೆ'ಯಲ್ಲಿ ಗೋಡೆಯ ಮೇಲಿನ ಕೆಂಪುದೀಪವೊಂದು ಹೊತ್ತಿಕೊಂಡು ಸದ್ದು ಮಾಡಿದರೆ, ಆ ಖಳನಾಯಕನಿಂದ ಸಂದೇಶ ಬರುತ್ತಿದೆ ಎಂದು ಅರ್ಥ. ಸಹಚರರೆಲ್ಲರೂ ತಡಬಡಾಯಿಸಿ ಎದ್ದು ಕೈ ಕಟ್ಟಿ ನಿಂತು ಕೆಂಪುದೀಪವನ್ನೇ ದಿಟ್ಟಿಸುತ್ತಾರೆ. ಆಗ ಎಲ್ಲಿಂದಲೋ ದನಿಯೊಂದು ಕೇಳಿಬರುತ್ತದೆ. ಕಠೋರ ಕಂಠದಲ್ಲಿ ಅದು ಸಹಾಯಕರಿಗೆ ಆದೇಶ ನೀಡುತ್ತದೆ. ಇವರೆಲ್ಲ 'ಯಸ್ ಬಿಗ್ ಬಾಸ್' ಎನ್ನುತ್ತ ಆಜ್ಞೆ ಸ್ವೀಕರಿಸುತ್ತಾರೆ. ಹೀಗೆ, ಇಡೀ ಚಿತ್ರದುದ್ದಕ್ಕೂ ಅಶರೀರವಾಣಿಯ ಮೂಲಕವೇ ಮುಖ್ಯ ವಿಲನ್ ತನ್ನ ವ್ಯವಹಾರ ನಡೆಸುತ್ತಾನೆ. ಪೊಲೀಸರನ್ನೂ ಒಳಗೊಂಡು ಇಡೀ ಸರ್ಕಾರವೇ ಬೆನ್ನುಬಿದ್ದು ಬಂಧಿಸಲು ಹೆಣಗಾಡುತ್ತಿದ್ದರೂ, ಆತ ಮಾತ್ರ ಅಗೋಚರ. ಅಂತೂ ಚಿತ್ರದ ಕ್ಲೈಮ್ಯಾಕ್ಸಿನಲ್ಲಿ ನಾಯಕ ಅಪ್ರತಿಮ ಸಾಹಸ ತೋರಿ, ಆ ಕೋಟೆಯನ್ನು ಭೇದಿಸಿ ಖಳನನ್ನು ಸಂಹರಿಸುತ್ತಾನೆ ಹಾಗೂ ಬಿಗ್ ಬಾಸ್‌ನ ದರ್ಶನವೂ ಆಗುತ್ತದೆ.

'ಬಿಗ್ ಬಾಸ್' ಹೆಸರಿನ ಕಿರುತೆರೆಯ ರಿಯಾಲಿಟಿ ಶೋದಲ್ಲಿ 'ಬಿಗ್ ಬಾಸ್'ನ ದನಿ ಮಾತ್ರ ಕೇಳುತ್ತದೆ. ಆತ ಯಾರು ಎಂಬುದು ಯಾರಿಗೂ ಗೊತ್ತಿಲ್ಲ. ಆತನ ಆಣತಿಯಂತೆ ಪ್ರತಿಯೊಬ್ಬರೂ ನಡೆದುಕೊಳ್ಳಬೇಕು. ವ್ಯತ್ಯಾಸವೆಂದರೆ, ಇಲ್ಲಿಯ ಬಿಗ್ ಬಾಸ್ ಮಾತ್ರ ಕೊನೆಯವರೆಗೂ ಅದೃಶ್ಯನಾಗಿಯೇ ಇರುತ್ತಾನೆ.

ಕಳೆದ ಮೂರ್‍ನಾಲ್ಕು ದಶಕಗಳಲ್ಲಿ ನಮ್ಮ ಜೀವನಕ್ರಮದಲ್ಲಾದ ಸ್ಥಿತ್ಯಂತರವನ್ನು ಗಮನಿಸಿದರೆ, ಈ ಬಿಗ್ ಬಾಸ್ ಎಂಬ ಗ್ರಹಿಕೆ ಕೂಡಾ ಮೇಲಿನ ಎರಡು